ಅಧ್ಯಕ್ಷರು : ಮಾನ್ಯ ವಿಶ್ವನಾಥ್ ಅವರೇ, ಮಾನ್ಯ ಶಂಕರಲಿಂಗೇಗೌಡರು, ಮಾನ್ಯ ದಿನೇಶ್ ಗುಂಡೂರಾವ್ ಮತ್ತು ಮಾನ್ಯ ಹೊನ್ನಾಳಿ ಜಬ್ಬಾರ್ ಖಾನ್ ಅವರುಗಳ ಮೂರು ಪ್ರಶ್ನೆಗಳಿಗೂ ಉತ್ತರ ಬಂದಿಲ್ಲ. ಅದಕ್ಕೋಸ್ಕರ I will hold over all these questions. ಉತ್ತರಗಳು ಸರಿಯಾಗಿ ಬರುವುದಕ್ಕೆ ಏರ್ಪಾಡು ಮಾಡಿ. We will take up in the next week. ಅವರು ಉತ್ತರ ಕಳಿಸಿಲ್ಲ.

ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ : ಅಧಿಕಾರಿಗಳಿಗೆ ಛೀಮಾರಿ ಹಾಕಲು ಹೇಳಿ.

ಅಧ್ಯಕ್ಷರು : ಆಯಿತು, ಹೇಳೋಣ. ಮುಂದಿನ ಪ್ರಶ್ನೆ ಮಾನ್ಯ ಚಂದ್ರಕಾಂತ್ ಬೆಲ್ಲದ್ ಅವರದ್ದು.

ಶ್ರೀ ದಿನೇಶ್ ಗುಂಡೂರಾವ್ : ಅಧ್ಯಕ್ಷರೆ, ನಮಗೆ ಉತ್ತರ ಕೊಟ್ಟಿದ್ದಾರೆ.

ಅಧ್ಯಕ್ಷರು : ನಮಗೆ ಬಂದಿಲ್ಲ. ನಮ್ಮ ಕಛೇರಿಗೆ ಬಂದಿಲ್ಲ.

ಧಾರವಾಡದಲ್ಲಿ ಜನಸಂಖ್ಯೆ ಆಧಾರದ ಮೇಲೆ ಹೊಸ ಶಾಲೆಗಳನ್ನು ಪ್ರಾರಂಭಿಸುವುದು

118 - ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜನಸಂಖ್ಯೆಗೆ ಅನುಗುಣವಾಗಿ ಪ್ರತಿಯೊಂದು ಹೊಸ ಬಡಾವಣೆಯಲ್ಲಿ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು? ಹಾಗೆಯೇ ಪ್ರಾರಂಭಿಸುವ ಪ್ರಾಥಮಿಕ ಶಾಲೆಗಳಿಗೆ ಸ್ವಂತ ಕಟ್ಟಡಗಳನ್ನು ಕಟ್ಟಿಸಲಾಗುವುದೆ?

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಹೌದು.

ಆ) 1999-2000ನೇ ಸಾಲಿನಲ್ಲಿ 4 ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಹಾಗೂ ಮುಂಬರುವ ವರ್ಷಗಳಲ್ಲಿ ಇನ್ನೂ ಹೆಚ್ಚಿನ ಶಾಲೆಗಳನ್ನು ಅವಶ್ಯಕತೆಗನುಗುಣವಾಗಿ ಪ್ರಾರಂಭಿಸ -ಲಾಗುವುದು. 1999-2000ನೇ ಸಾಲಿನಲ್ಲಿ 4 ಶಾಲೆಗಳನ್ನು ಪ್ರಾರಂಭಿಸಲಾಗಿರುವ 4 ಶಾಲೆಗಳಿಗೆ ಸ್ವಂತ ಕಟ್ಟಡ ಒದಗಿಸಲಾಗಿದೆ.

ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಧಾರವಾಡದ ನಾಲ್ಕು ಹೊಸ ಬಡಾವಣೆಗಳಲ್ಲಿ ಹೊಸದಾಗಿ ನಾಲ್ಕು ಶಾಲೆಗಳನ್ನು ಪ್ರಾರಂಭಿಸಿದ್ದೇವೆಂದು ಮಾನ್ಯ ಸಚಿವರು ಹೇಳಿದ್ದಾರೆ ಮತ್ತು ಅದಕ್ಕೆ ನಾಲ್ಕು ಸ್ವಂತ ಕಟ್ಟಡಗಳನ್ನೂ ಸಹ ಕೊಟ್ಟಿದ್ದೇವೆಂದು ಅವರು ಹೇಳಿದ್ದಾರೆ. ಅವು ಯಾವುವು ಎಂದು ತಿಳಿಸಬೇಕು. ಮತ್ತು ಇದಲ್ಲದೇ ಇನ್ನೂ ಹೆಚ್ಚಿನ ಬಡಾವಣೆಗಳಲ್ಲಿ ಎಲ್ಲೆಲ್ಲಿ

ಪ್ರಾಥಮಿಕ ಶಾಲೆಗಳು ಬೇಕಾಗಿದೆ, ಕಟ್ಟಡಗಳು ಬೇಕಾಗಿವೆ? ಅದರ ಬಗ್ಗೆ ಅವರು ಏನಾದರೂ ಮಾಹಿತಿ ತರಿಸಿಕೊಂಡಿದ್ದಾರಾ ಹೇಗೆ? ಅದರ ಬಗ್ಗೆಯೂ ಸಹ ತಮ್ಮ ಮೂಲಕ ಅವರು ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್. ವಿಶ್ವನಾಥ್ : ಮಾನ್ಯ ಅಧ್ಯಕ್ಷರೆ, ನಮ್ಮ ರಾಜ್ಯದ ಆರು ಕಾರ್ಪೊರೇಷನ್ ಏರಿಯಾಗಳಲ್ಲಿ ನಗರಪಾಲಿಕೆ ವ್ಯಾಪ್ತಿಯಲ್ಲಿ ನಾನೀಗ ಎರಡು ತಿಂಗಳುಗಳ ಕೆಳಗೆ ಅಲ್ಲಿನ ಮೇಯರ್, ಎಜುಕೇಶನ್ ಆಫೀಸರ್, ಮತ್ತು ಕಾರ್ಪೊರೇಷನ್ ಕಮೀಷನರ್ ಅವರೊಂದಿಗೆ ಮೀಟಿಂಗ್ ಮಾಡಿದ್ದೇನೆ. ತಮ್ಮ ಹುಬ್ಬಳ್ಳಿ-ಧಾರವಾಡದಲ್ಲಿ ಕೂಡ ಈ ಒಂದು ಕ್ರಿಯಾ ಯೋಜನೆಯನ್ನು ತಯಾರು ಮಾಡಿದ್ದೇನೆ. ನಿಜ, ನಮ್ಮ ನಗರಪಾಲಿಕೆ ವ್ಯಾಪ್ತಿಯಲ್ಲಿ ಹೊಸ ಹೊಸ ಬಡಾವಣೆಗಳಲ್ಲಿ ನಮ್ಮ ಸರ್ಕಾರೀ ಶಾಲೆಗಳನ್ನು ತೆರೆದಿಲ್ಲ. ಆದ್ದರಿಂದ ಈಗ ನಮ್ಮ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ಏನಾಗಿದೆ ಎಂದರೆ ಈ ಎಜುಕೇಶನ್ ಬಗ್ಗೆ ರಾಜ್ಯ ವಲಯದಲ್ಲಿ ಪ್ರಿಯಾರಿಟಿ ಸೆಕ್ಟಾರ್‌ನಲ್ಲಿ ಟಾಪ್‌ನಲ್ಲಿದ್ದರು ಕೂಡ ಕಾರ್ಪೊರೇಷನ್ ಲಿಮಿಟ್‌ಗಳು ಏನಾಗಿದೆ ಅಂದರೆ ಬಾಟಮ್‌ಗೆ ಬಂದು ಹೋಗಿದ್ದಾವೆ. ಆದ್ದರಿಂದ ನಾವು ಅವರನ್ನೆಲ್ಲಾ ಕರೆದು ಮಾತನಾಡಿ, ಹೊಸ ಹೊಸ ಬಡಾವಣೆಗಳಲ್ಲಿ ಹಂತಹಂತವಾಗಿ ಶಾಲೆಗಳನ್ನು ತೆರೆಯುತ್ತೇವೆ ಎನ್ನುವ ವಿಚಾರದಲ್ಲಿ ಈಗಾಗಲೇ ಹುಬ್ಬಳ್ಳಿ-ಧಾರವಾಡ ಎರಡೂ ಸಿಟಿಗಳು ಸೇರಿದ ಹಾಗೆ ಕ್ರಿಯಾ ಯೋಜನೆಗಳನ್ನು ಮಾಡಿ ಮುಂದಿನ ಶೈಕ್ಷಣಿಕ ವರ್ಷದಿಂದ ಅಗತ್ಯವಾದಂತಹ ಶಾಲೆಗಳನ್ನು ತೆರೆಯುವುದಕ್ಕೆ ನಾವು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ : ಮಾನ್ಯ ಅಧ್ಯಕ್ಷರೆ, ಇಲ್ಲಿ ಅವರು ಉತ್ತರ ಕೊಟ್ಟಿರುವುದರಲ್ಲಿ 'ಈಗಾಗಲೇ ಕಳೆದ ಸಾಲಿನಲ್ಲಿ ನಾಲ್ಕು ಬಡಾವಣೆಗಳಲ್ಲಿ ಶಾಲೆಗಳನ್ನು ಪ್ರಾರಂಭ ಮಾಡಿದ್ದೇವೆ' ಎಂದು ಹೇಳಿದ್ದಾರೆ. ಅವಕ್ಕೆ ಸ್ವಂತ ಕಟ್ಟಡಗಳನ್ನೂ ಕೊಟ್ಟಿದ್ದೇವೆಂದು ಸಹ ಹೇಳಿದ್ದಾರೆ. ಅವು ಯಾವುವು ಎಂದು ತಿಳಿಸಬೇಕೆಂದು ನಾನು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಹೆಚ್. ವಿಶ್ವನಾಥ್ : ಕಳೆದ ವರ್ಷದಿಂದ ನಾಲ್ಕು ಶಾಲೆಗಳನ್ನು ಪ್ರಾರಂಭಿಸಲಾಗಿದೆ ಹೇಳಿದ್ದೇನೆ. ಅವು ಯಾವ್ಯಾವು ಶಾಲೆಗಳು ಎಂಬ ಬಗ್ಗೆ ಮಾಹಿತಿಗಳನ್ನು ನಾನು ಕಳುಹಿಸಿಕೊಡುತ್ತೇನೆ.

ಶ್ರೀ ಬೆಲ್ಲದ ಚಂದ್ರಕಾಂತ್ ಗುರಪ್ಪ : ಎಲ್ಲಿ ಶಾಲೆಗಳನ್ನು ಪ್ರಾರಂಭ ಮಾಡಿದ್ದೀರಿ ಹಾಗೂ ಸ್ವಂತ ಕಟ್ಟಡಗಳು ಎಲ್ಲಿವೆ ಎಂಬ ಬಗ್ಗೆ ಮಾಹಿತಿಗಳನ್ನು ಕಳುಹಿಸಿಕೊಡಿ.

ಅಧ್ಯಕ್ಷರು : ಮುಂದಿನ ಪ್ರಶ್ನೆ ಮಾನ್ಯ ಚೆನ್ನಿಗಪ್ಪ ಅವರದ್ದು, ಅವರು ಇಲ್ಲ. ಸರ್ಕಾರದವರು 15 ದಿವಸ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ದಿನೇಶ್ ಗುಂಡೂರಾವ್ : ನನಗೆ ಉತ್ತರ ಬಂದಿದೆ.

ಅಧ್ಯಕ್ಷರು : ಮುಂದಿನ ರೌಂಡ್‌ಗೆ ಬರುತ್ತೇನೆ. ಇನ್ನೂ 20 ನಿಮಿಷ ಇದೆ ಪ್ರಶ್ನೋತ್ತರ ಮುಗಿಯುವುದಕ್ಕೆ. ಮುಂದಿನ ಪ್ರಶ್ನೆ ಮುನಿನರಸಿಂಹಯ್ಯ.